ಶ್ರೀ ಕೆ. ಲಕ್ಕಪ್ಪ.—ನಾನು ಮೊದಲೇ ಉತ್ತರ ಹೇಳಿದ್ದೇನೆ. ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ದಕ್ಷಿಣ ಕನ್ನಡ ಜಿಲ್ಲೆಗೆ ಕಡಮೆ ಹಣ ಒದಗಿಸಿಲ್ಲ. ಇನ್ನೂ ಮಾಡಬೇಕಾದ ಕೆಲಸಗಳು ಬಹಳ ಇವೆ ಎಂದು ತಿಳಿದುಕೊಂಡಿದ್ದೇನೆ. ಹಣವಿಲ್ಲದೆ ನಾವು ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಹಾಸನ ಜಿಲ್ಲೆಗೆ ಕೊಟ್ಟಿರತಕ್ಕುದು 1.27 ಲಕ್ಷ ರೂಪಾಯಿ. ಇದು ಬಹಳ ಕಡಮೆ. ಸರ್ಕಾರದವರು ಪುನರ್ವಿಮರ್ಶೆ ಮಾಡಿ ಜಾಸ್ತಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ, ಸ್ವಾಮಿ ?

ಶ್ರೀ ಕೆ. ಲಕ್ಕಪ್ಪ.—ನಾನು ಮೊದಲೇ ಹೇಳಿದ ಹಾಗೆ ಎಲ್ಲ ಜಿಲ್ಲೆಗಳಿಗೂ ಒಂದೇ ಸಮನಾಗಿ ಹಂಚುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲೆ ಎಷ್ಟು ಮೈಲಿ ರಸ್ತೆ ಇದೆ, ಎಷ್ಟು ಮೈಲಿ ರಸ್ತೆಯ ಆವಶ್ಯಕತೆ ಇದೆ ಎನ್ನುವುದನ್ನೆಲ್ಲ ನೋಡಿ ಕೊಡಬೇಕಾಗುತ್ತದೆ, ಆ ರೀತಿ ಕೊಡುತ್ತೇವೆ.

Misappropriation of Panambur Service Co-operative Credit Society Funds

576. Sri RATNAKUMAR KATTEMAR (Moodabidri).—

Will the Minister for Development be pleased to state :—

(*a*) whether Government has received a complaint from the President of the Panambur Service Co-operative Credit Socity, Panambur, South Kanara, alleging misappropriation of society funds to the tune of over Rs. 18,000 ;

(*b*) whether complaint on the alleged misappropriation of funds of the said society has been lodged with the Inspector of Police, Mangalore Rural Circle in the above matter ;

(*c*) whether the person against whom the complaints have been lodged is a member of the D.C.C., South Kanara ;

(*d*) whether the audit of accounts of the society and enquiry under section 64 are complete ;

(*e*) the total amount of society funds misappropriated ;

(*f*) whether the persons complained against have been arrested and the books of the society have been seized ?

Sri B. L. GOWDA (Deputy Minister for Co-operation).—

(*a*) Yes.

(*b*) Yes ; by the President of the Society.

(*c*) No information.

(*d*) The audit of the accounts of 1967-68 is completed but not the enquiry under section 64.

(*e*) Rs. 18,000 as alleged by the President.

(*f*) No.

ಶ್ರೀ ಕೆ. ರತ್ನಕುಮಾರ ಶೆಟ್ಟಿ.—ಆಪಾದನೆ ಮಾಡಿರುವ ವ್ಯಕ್ತಿಯ ಹೆಸರು ಹೇಳಬಹುದೋ ?

† ಶ್ರೀ ಬಿ. ಎಲ್. ಗೌಡ.—ಶ್ರೀನಿವಾಸ ರಾವ್ ಎಂದು ಅವರ ಹೆಸರು.

†Indicates that remarks or speeches have not been revised by the member concerned†

ಶ್ರೀ ಕೆ. ರತ್ನಕುಮಾರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಇದು ಅರ್ಧಗಂಟೆ ಕಾಲದ ಚರ್ಚೆಗೆ ತೆಗೆದುಕೊಳ್ಳಿತಕ್ಕ ವಿಚಾರ, ಅದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮುಂಚಿತವಾಗಿಯೇ ಭರವಸೆ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಭಾನ್ಕರ ಶೆಟ್ಟಿ.—18 ಸಾವಿರ ರೂಪಾಯಿ ದುರುಪಯೋಗವಾಗಿದೆ ಎಂದು ಕೊಟ್ಟಿದ್ದಾರೆ. ಆಪಾದಿತರನ್ನು ಏನಾದರೂ ಆಪಾದನೆಗೆ ಒಳಪಡಿಸಲಾಗಿದೆಯೇ? ಅವರನ್ನು ಬಂಧಿಸಲಾಗಿದೆಯೇ, ಎಂದು ಕೇಳಿರುವುದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಇವರ ಮೇಲೆ ಇಷ್ಟು ಕರುಣೆ ಏಕೆ? ಈ ವಿಷಯದಲ್ಲಿ ಏನು ಕ್ರಮ ಕೈಕೊಂಡಿದ್ದಾರೆ, ಏನಾಗಿದೆ ಎಂದು ಹೇಳುತ್ತಾರೆಯೇ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಈ ಸಂಬಂಧವಾಗಿ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರಿಗೆ ದೂರು ಕೊಟ್ಟಿದೆ, ಆಡಿಟ್ ಮಾಡಿಸುತ್ತಿದ್ದೇವೆ, ಕೋ-ಆಪರೇಟಿವ್ ಸಂಘಗಳ ಕಾನೂನಿನ 64ನೇ ಸೆಕ್ಷನ್ ಪ್ರಕಾರ ಎನ್‌ಕ್ವೈರಿ ನಡೆಯುತ್ತಿದೆ.

ಶ್ರೀ ಬಿ. ಭಾನ್ಕರ ಶೆಟ್ಟಿ.—ಆಪಾದಿತರು ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಕಮಿಟಿಯ ಸದಸ್ಯರಲ್ಲವೇ, ಸ್ವಾಮಿ?

ಶ್ರೀ ಬಿ. ಎಲ್. ಗೌಡ.—ಆ ವಿಷಯ ನನಗೆ ಗೊತ್ತಿಲ್ಲ.

Sri H. N. NANJE GOWDA.—It is said here that the audit of the accounts for 1967-68 is completed, but not the enquiry. What is the stage of the enquiry? When did the enquiry commence?

Sri B. L. GOWDA.—The enquiry commenced during October-November 1968.

Sri N. G. HALAPPA.—May I know whether they have apprehended the accused and at what stage is the police investigation?

ಶ್ರೀ ಬಿ. ಎಲ್. ಗೌಡ.—ಕಂಪ್ಲೈಂಟ್ ಕೊಟ್ಟಿರುವುದು 17-9-68 ರಲ್ಲಿ. It is under investigation.

ಶ್ರೀ ಎಂ. ನಾಗಪ್ಪ.—ಇದು ಬಹಳ ನಿಧಾನವಾಗಿರುವುದರಿಂದ ಮತ್ತೊಂದು ಧಾರ್ಜ್‌ಷೀಟ್ ಹಾಕುತ್ತೀರಾ?

ಶ್ರೀ ಬಿ. ಎಲ್. ಗೌಡ.—ನಿಧಾನವಾಗಲು ಕಾರಣವಿದೆ. ಎನ್‌ಕ್ವೈರಿ ಮಾಡಿ ಪೋಲೀಸ್ ಇರಾಖೆಗೆ ಕೊಟ್ಟಿಲ್ಲದೆ ನಿಧಾನವಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ದುರುಪಯೋಗವಾಗಿರುವುದನ್ನು ಸಂಪೂರ್ಣವಾಗಿ ವಾಪಸ್ಸು ಪಡೆಯಲು ಅವಕಾಶವಿದೆಯೇ?

ಶ್ರೀ ಬಿ. ಎಲ್. ಗೌಡ.—ಹಣ ವಾಪಸು ಪಡೆಯಲು ತೊಂದರೆಯೇನೂ ಇಲ್ಲ, ವಾಪಸ್ಸು ಪಡೆಯಲು ಅವಕಾಶವಿದೆ ಎಂದು ತಿಳಿದುಬಂದಿದೆ. ದುರುಪಯೋಗ ಮಾಡಿರುವವರು ಧಡೂತಿ ಆಸಾಮಿ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಧಡೂತಿ ಆಸಾಮಿಯಾದರೆ ದುರುಪಯೋಗ ಮಾಡಬಹುದೆಂದು ಆದೇಶ ಕೊಡರಾಗಿದೆಯೇ?

ಶ್ರೀ ಬಿ. ಎಲ್. ಗೌಡ.—ಹಾಗೇನೂ ಇಲ್ಲ. ಅವರಿಗೆ ಸುಮಾರು 90 ಸಾವಿರ ರೂಪಾಯಿಗಳ ಪ್ರಾಪರ್ಟಿ ಇದೆ. ಆದ್ದರಿಂದ ಹಾಗೆ ಹೇಳಿದೆ.

Land owned by Harijan Families in Kendahalli village

584. Sri C. R. RANGE GOWDA (Magadi).—

Will the Minister for Revenne be pleased to state :—

(*a*) the number of Harijan families in Kendahalli village, in Kasaba Hobli, Magadi taluk ;